O.S 163/13
DW-1

**ಸಾಕ್ಷಿಯನ್ನು ದಿನಾಂಕ 02-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಬಿ ಎ ವಕೀಲರಿಂದಃ**

**1.** ಸರ್ವೆ ನಂ **42** ಪೋಡಾಗಿ ಸರ್ವೆ ನಂ **42/1** ಆಗಿರುತ್ತದೆ. ಸರ್ವೆ ನಂ **42/1** ರ **1** ಎಕರೆ **34** ಗುಂಟೆ ನನ್ನ ಹೆಸರಿನಲ್ಲಿ ಖಾತೆ ಇದ್ದು, ಸದರಿ ಸರ್ವೆ ನಂ ನ ಉಳಿಕೆ ಜಮೀನು ಯಾರ ಹೆಸರಿನಲ್ಲಿ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಹೆಸರಿಗೆ **1** ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ. **1** ನೇ ಪ್ರತಿವಾದಿಯ ಗಂಡುಮಕ್ಕಳು ಕ್ರಯಪತ್ರಕ್ಕೆ ಸಹಿಗಳನ್ನು ಮಾಡಿರುತ್ತಾರೆ. ನಾನು ಕೆಂಜಿಗಪ್ಪರವರ ಕುಟುಂಬದವರಿಂದ ಬೇರೆ ಆಸ್ತಿಗಳನ್ನು ಕ್ರಯಕ್ಕೆ ಪಡೆದಿರುತ್ತೇನೆಂದರೆ ಸರಿ. ಕೆಂಜಿಗಪ್ಪನವರ ಮಕ್ಕಳಿಗೆ ವಿಭಾಗದಲ್ಲಿ ಬಂದಂತಹ ಆಸ್ತಿಗಳನ್ನು ನನಗೆ ಮಾರಾಟ ಮಾಡಿರುತ್ತಾರೆಂದು ನನ್ನ ಹೆಸರಿಗೆ ಬೆರೆದುಕೊಟ್ಟ ಕ್ರಯಪತ್ರದಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ. ನಾನು ದಿಃ **13.03.2001** ರ ಕ್ರಯ ಪತ್ರದ ಮೂಲಕ ಕೆಂಜಿಗಪ್ಪನ ತಮ್ಮಂದಿರಾದ ನರಸೀಯಪ್ಪ ಮತ್ತು ಮುದ್ದಪ್ಪ ರವರಿಂದ ಸರ್ವೆ ನಂ **43** ರಲ್ಲಿ **2** ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತೇನೆಂದರೆ. ಕೆಂಜಿಗಪ್ಪ ಮತ್ತು ಅವರ ಸಹೋದರರ ನಡುವೆ ಆದ ಪಾರಿಕತ್ತನ್ನು ನಾನು ನೋಡಿರುತ್ತೇನೆ. ಸದರಿ ಪಾರಿಕತ್ತಿನಲ್ಲಿ ಕೆಂಜಿಗಪ್ಪರವರ ಭಾಗಕ್ಕೆ ಸರ್ವೆ ನಂ **43** ಆಸ್ತಿ ಬಂದಿರುತ್ತದೆ.

**2.** ಸರ್ವೆ ನಂ **42** ಕೆಂಜಿಗಪ್ಪರವರಿಗೆ **Tenancy** ಯಲ್ಲಿ ಬಂದಿರುತ್ತದೆ. ಸದರಿ **Tenancy** ಆಧಾರದ ಮೇಲೆ ಸರ್ವೆ ನಂ **42** ಕೆಂಜಿಗಪ್ಪರವರ ಹೆಸರಿಗೆ ಖಾತೆ ಆಗಿದ್ದು ಅವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿ. ಸದರಿ ಸರ್ವೆ ನಂ **42** ರ ಹಳೇ ಸರ್ವೆ ನಂ **11** ಆಗಿದ್ದು ಸದರಿ ಆಸ್ತಿಯನ್ನು ಮೂಲ ಖಾತೆದಾರರಾದ ಕೆಂಜಿಗಪ್ಪ ಮತ್ತು ಬಸವಯ್ಯರವರು ದಿಃ **10.07.1972** ರ ಕ್ರಯಪತ್ರದ ಮೂಲಕ **1** ನೇ ವಾದಿಯ ಗಂಡ ದುರ್ಗಪ್ಪರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಆ ರೀತಿ ಕ್ರಯಪತ್ರ ಬರೆದುಕೊಟ್ಟ ನಂತರ ದುರ್ಗಪ್ಪರವರು ಸ್ವಾಧೀನದಲ್ಲಿದ್ದು ಅವರು ಮೃತ ಪಟ್ಟ ನಂತರ ಸದರಿ ಸರ್ವೆ ನಂಬರ್ ನಲ್ಲಿ ಸದರಿ ವಾದಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ವಾದಿಗಳು ಕೆಂಜಿಗಪ್ಪವರ ಸಂಬಂಧಿಕರು ಎಂದರೆ ಸರಿ. ದಾವಾ ಆಸ್ತಿಯ, ಆಸ್ತಿ ವಾದಿಯ ಗಂಡನಿಗೆ ಕ್ರಯವಾಗಿರುವ ಬಗ್ಗೆ ನನಗೆ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದರೂ ನಾನು ಮತ್ತು **1** ನೇ ಪರ **2** ವಾದಿ ಸೇರಿಕೊಂಡು ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಸುಳ್ಳು ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ದುರ್ಗಪ್ಪನ ಮಕ್ಕಳು ಸ್ವಾಧೀನದಲ್ಲಿರುತ್ತಾರೆ, ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುವುದಿಲ್ಲ ಯಾವುದೇ

ಅಡಿಕೆ ಮತ್ತು ತೆಂಗನ್ನು ಬೆಳೆಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಮನೆಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಮರಗಳನ್ನು ನಾನು ಕಡಿಯಲು ಹೋದಾಗ ವಾದಿಗಳು ನನ್ನ ಹಾಗೂ ಇತರರ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ನಾನು ಈ ದಾವೆಗೋಸ್ಕರವಾಗಿ ಸೃಷ್ಟಿ ಮಾಡಿಕೊಂಡು ಬಂದು ನಿಡಿ-1 ರಿಂದ 40 ನ್ನು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ದುರ್ಗಪ್ಪನಿಗೆ ಕ್ರಯವಾದಾಗಿನಿಂದಲೂ ದಾವಾ ಆಸ್ತಿಯಲ್ಲಿ ಅವರು ಮತ್ತು ಅವರ ಕುಟುಂಬದವರು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S 163/13
DW-1

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
*Koratagere.*